544(1069) ಶ್ರೀ ಜೀವರಾಜ ಡಿ.ಎನ್. (ಶೃಂಗೇರಿ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿರುವ ಪೂರ್ವ ಪ್ರಾಥಮಿಕ ಕೇಂದ್ರಗಳ (ಪಿಪಿಸಿ) ಸಂಖ್ಯೆ ಎಷ್ಟು; ತಾಲ್ಲೂಕುವಾರು ವಿವರ ನೀಡುವುದು;

ಆ) ಕೊಪ್ಪ, ಶೃಂಗೇರಿ ಹಾಗೂ ನರಸಿಂಹರಾಜಪುರ ತಾಲ್ಲೂಕುಗಳಲ್ಲಿ ಕೆಲವು ಪಿಪಿಸಿಗಳನ್ನು ಮುಚ್ಚಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಮುಚ್ಚಲು ಕಾರಣಗಳೇನು

ಈ) ಈ ಕೇಂದ್ರಗಳನ್ನು ಯಾವಾಗ ಪನರ್ ಆರಂಭಿಸಲಾಗುವುದು?

ಶ್ರೀಮತಿ ಭಾಗೀರಥಿ ಮರಳಸಿದ್ಧನಗೌಡ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ 122 ಪೂರ್ವ ಪ್ರಾಥಮಿಕ ಕೇಂದ್ರಗಳು ಇವೆ. ತಾಲ್ಲೂಕುವಾರು ವಿವರ ಈ ಕೆಳಗಿನಂತಿದೆ.

ಚಿಕ್ಕಮಗಳೂರು	36
ಕಡೂರು	16
ಕೊಪ್ಪ	15
ಮೂಡಿಗೆರೆ	12
ಎನ್.ಆರ್. ಪುರ	20
ಶೃಂಗೇರಿ	5
ತರೀಕೆರೆ	18

ಆ) ಯಾವುದೇ ಕೇಂದ್ರಗಳನ್ನು ಮುಚ್ಚಲಾಗಿಲ್ಲ.

ಇ) ಅನ್ವಯಿಸುವುದಿಲ್ಲ.

ಇ) ಅನ್ವಯಿಸುವುದಿಲ್ಲ.

545(951) ಶ್ರೀ ಕಳಕಪ್ಪ ಗುರುಶಾಂತಪ್ಪ ಬಂಡಿ (ರೋಣ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೆ.ಸಿ.ಸಿ. ಬ್ಯಾಂಕ್ ಧಾರವಾಡ ಯಾರ ಆಡಳಿತದಲ್ಲಿದೆ;

ಆ) ಈ ಬ್ಯಾಂಕಿನಲ್ಲಿ ಖಾಸಗಿಯವರ, ಅರ್ಬನ್ ಬ್ಯಾಂಕುಗಳ, ಸಹಕಾರಿ ಸಂಘಗಳ ಠೇವಣಿ ಹಣ 31–3–2004ಕ್ಕೆ ಎಷ್ಟಿದೆ;

ಇ) ಠೇವಣಿ ಹಣ ವಾಪಸ್ಸು ಕೋರಿ ಬಹಳಷ್ಟು ಠೇವಣಿದಾರರು ಅರ್ಜಿ ಸಲ್ಲಿಸಿಲ್ಲವೆ;

ಈ) ಈ ಬ್ಯಾಂಕು 31–3–2004ಕ್ಕೆ ಅನುಭವಿಸಿದ ಹಾನಿ ಎಷ್ಟು?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು)

ಅ) ಕೆ.ಸಿ.ಸಿ. ಬ್ಯಾಂಕ್ ನಿ, ಧಾರವಾಡ ಈ ಬ್ಯಾಂಕು ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 30(1)ರನ್ವಯ ನೇಮಿಸಲ್ಪಟ್ಟ ಆಡಳಿತಗಾರರ ಆಡಳಿತದಲ್ಲಿದೆ.

ಆ) ದಿನಾಂಕ 31–3–2004ಕ್ಕೆ ರೂ. 89.05 ಕೋಟಿ (ವ್ಯಕ್ತಿಗತ) ಖಾಸಗಿಯವರ ಠೇವು, ರೂ. 184.00 ಕೋಟಿ ಅರ್ಬನ್ ಬ್ಯಾಂಕುಗಳ ಠೇವು ಹಾಗೂ ರೂ.47.67 ಕೋಟಿ ಸಹಕಾರ ಸಂಘಗಳ ಠೇವಣಾತಿ ಸೇರಿ ರೂ. 320.72 ಕೋಟಿ ಠೇವಣಾತಿ ಹೊಂದಿರುತ್ತದೆ.

ಇ) ಠೇವಣಿ ಹಣ ವಾಪಸ್ಸು ಕೋರಿ ಬಹಳಷ್ಟು ಅರ್ಜಿಗಳು ಸ್ವೀಕೃತಿಯಾಗುತ್ತಿದ್ದು, ಸಾಲ ವಸೂಲಿ, ಹಾಗೂ ಇತರ ಮೂಲಗಳಿಂದ ಲಭ್ಯವಾಗುತ್ತಿರುವ ಆರ್ಥಿಕ ಸಂಪನ್ಮೂಲಗಳಿಂದ ವ್ಯಕ್ತಿಗಳ ಠೇವುದಾರರಿಗೆ ವಾರಕ್ಕೆ ಒಂದು ಸಾರಿ ರೂ. 500/– ರಂತೆ ಪಾವತಿಸಲಾಗುತ್ತದ್ದು. ತುರ್ತು ಸಂದರ್ಭಗಳಾದ ವೈದ್ಯಕೀಯ ಚಿಕಿತ್ಸೆ, ಮದುವೆ ಕಾರ್ಯಗಳಿಗೆ ಮತ್ತು ಶಿಕ್ಷಣ ವೆಚ್ಚಕ್ಕಾಗಿ ಠೇವು ಮರು ಪಾವತಿ ಕೋರಿ ಬಂದಿರುವ ಬೇಡಿಕೆಗಳನ್ನು ಸಹಾನುಭೂತಿಯಿಂದ ಪರಿಶೀಲಿಸಿ ನಿಗಧಿತ ಪ್ರಮಾಣದಲ್ಲಿ ಹಂತ ಹಂತವಾಗಿ ಹಣ ಪಾವತಿಸಲಾಗುತ್ತದೆ.

ಈ) ದಿನಾಂಕ 31–3–2004ಕ್ಕೆ ರೂ. 148.00 ಕೋಟಿ ಹಾನಿ ಅನುಭವಿಸಿದೆ.

546(952) ಶ್ರೀ ಕಳಕಪ್ಪ, ಗುರುಶಾಂತಪ್ಪ, ಬಂಡಿ (ರೋಣ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಜಿಲ್ಲಾವಾರು ನೇಕಾರರ ಸಹಕಾರ ಸಂಘಗಳ ಸಂಖ್ಯೆ ಎಷ್ಟು;

ಆ) ಇವುಗಳಲ್ಲಿ ಲಾಭದಲ್ಲಿರುವ ಹಾಗೂ ನಷ್ಟದಲ್ಲಿರುವ ಸಹಕಾರ ಸಂಘಗಳು ಎಷ್ಟು;

ಇ) ನಷ್ಟದಲ್ಲಿರುವ ಸಂಘಗಳ ಒಟ್ಟು ಹಾನಿ
31–3–2003ಕ್ಕೆ
31–3–2004ಕ್ಕೆ

ಈ) ಈ ಸಂಘಗಳಿಗೆ ಕಳೆದ ಮೂರು ವರ್ಷಗಳಲ್ಲಿ ಸರ್ಕಾರ ಕೊಟ್ಟಿರುವ ಸಬ್ಸಿಡಿ ಇತ್ಯಾದಿ ಆರ್ಥಿಕ ಸಹಾಯದ ಮೊತ್ತವೆಷ್ಟು;

ಉ) ಈ ಸಹಕಾರ ಸಂಘಗಳಿಗೆ ಸರ್ಕಾರ ಕೊಡಬೇಕಾಗಿರುವ ಸಹಾಯಧನ ಸಬ್ಸಿಡಿ ಬಾಕಿ ಎಷ್ಟು?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು)

ಅ) ಒಟ್ಟು 643. ಜಿಲ್ಲಾವಾರು ಪಟ್ಟಿ ಲಗತ್ತಿಸಿದೆ.

ಆ) 1) ಲಾಭದಲ್ಲಿರುವ ಸಹಕಾರ ಸಂಘಗಳು 199
2) ನಷ್ಟದಲ್ಲಿರುವ ಸಹಕಾರ ಸಂಘಗಳು 444

ಇ) 31–3–2003ಕ್ಕೆ ರೂ. 246.61 ಲಕ್ಷಗಳು.

2003–04ನೇ ಸಾಲಿನಲ್ಲಿ ಅನೇಕ ಸಹಕಾರ ಸಂಘಗಳ ಲೆಕ್ಕಪರಿಶೋಧನೆ ಇನ್ನೂ ಪೂರ್ಣಗೊಂಡಿಲ್ಲದಿರುವುದರಿಂದ ವಿವರ ಲಭ್ಯವಿರುವುದಿಲ್ಲ.

ಈ) ರೂ. 937.21 ಲಕ್ಷಗಳು

ಉ) ರೂ. 119.47 ಲಕ್ಷಗಳು.